ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಎಡಿಎಂ-2(4)/ಶಾ.ಆ.ವಿ-31/2021-22 ದಿನಾಂಕ.13-09-2021

**-: ಸುತ್ತೋಲೆ :-**

ವಿಷಯ:- ಶಾಲೆ ಮತ್ತು ಕಾಲೇಜು ಆವರಣದಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗಗಳನ್ನು ಸ್ಥಳಾಂತರಿಸುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಪತ್ರ ಸಂಖ್ಯೆ: ಎನರ್ಜಿ 603 ವಿಎಸ್‌ಎಲ್ 2021, ದಿನಾಂಕ.06-09-2021.
2. ದಿನಾಂಕ.15-08-2021 ರ ಸ್ವಾತಂತ್ರ್ಯ ದಿನಾಚರಣೋತ್ಸವ ಸಂದರ್ಭ ತುಮಕೂರು ಜಿಲ್ಲೆ ಇಲ್ಲಿ ವಿದ್ಯುತ್ ಸಂಪರ್ಕದಿಂದ ಆದ ದುರ್ಘಟನೆಯ ಹಿನ್ನಲೆಯಲ್ಲಿ.

*****

ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಮತ್ತು ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಪ್ರಾಣ ಮತ್ತು ಆಸ್ತಿಗೆ ರಕ್ಷಣೆ ಒದಗಿಸುವುದು ಶಾಲಾ ಮುಖ್ಯಸ್ಥರ ಹಾಗೂ ಇಲಾಖಾ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ.

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ತಿಳಿಸಿರುವಂತೆ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ವಿದ್ಯುತ್ ತಂತಿ ತಗುಲಿ, ವಿದ್ಯಾರ್ಥಿಯೊಬ್ಬರು ಮೃತಪಟ್ಟಿರುವುದು ವರದಿಯಾಗಿರುತ್ತದೆ. ಆದ್ದರಿಂದ ಶಾಲಾ ಕಾಲೇಜುಗಳ ತರಗತಿಗಳ ಕೊಠಡಿ, ಆವರಣ ಮತ್ತು ಜಮೀನಿನಲ್ಲಿರುವ ಮೊಬೈಲ್ ಟವರ್ ಮತ್ತು ವಿದ್ಯುತ್ ಮಾರ್ಗಗಳನ್ನು ಬೇರೆಡೆಗೆ ಸ್ಥಳಾಂತರಿಸುವುದು/ಎ.ಬಿ ಕೇಬಲ್‌ಗಳನ್ನು ಅಳವಡಿಸುವ ಅಗತ್ಯವಿದೆ.

ಈ ಸಂಬಂಧ ರಾಜ್ಯದ ಎಲ್ಲಾ ತಾಲ್ಲೂಕು ಮತ್ತು ವಲಯದ ಹಂತಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಿ.ಆರ್.ಪಿ/ಬಿ.ಆರ್.ಪಿ.ಗಳ ತಂಡಗಳನ್ನು ರಚಿಸಿ, ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಪ್ರಕರಣವನ್ನು ತಾಲ್ಲೂಕು ಮತ್ತು ವಲಯವಾರು ಕ್ರೋಢೀಕರಣಗೊಳಿಸಿ, ಇಂಧನ ಇಲಾಖೆಯ ಮೇಲಧಿಕಾರಿಗಳ ಗಮನಕ್ಕೆ ತಂದು ವಿದ್ಯುತ್ ಮಾರ್ಗಗಳನ್ನು ಮತ್ತು ಮೊಬೈಲ್ ಟವರ್‌ಗಳನ್ನು ಸ್ಥಳಾಂತರಿಸಲು/ ಎ.ಬಿ ಕೇಬಲ್‌ಗಳನ್ನು ಅಳವಡಿಸಲು ಆಧ್ಯತೆಯ ಮೇರೆಗೆ ಕ್ರಮವಹಿಸುವುದು.

ಕ್ರಮ ವಹಿಸಿರುವ ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ಕ್ರೋಢೀಕರಿಸಿ ಈ ಕಛೇರಿಗೆ ಸಲ್ಲಿಸುವುದು.

ಇಂತಹ ಪ್ರಕರಣಗಳು ಕ್ರಮವಹಿಸದೇ ಬಾಕಿ ಉಳಿದಲ್ಲಿ, ಮೇಲಧಿಕಾರಿಗಳ ತಪಾಸಣಾ ಸಮಯದಲ್ಲಿ ಕಂಡುಬಂದಲ್ಲಿ ತಮ್ಮ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ವಹಿಸಲಾಗುವುದು, ಇದಕ್ಕೆ ಆಸ್ಪದ ನೀಡದಂತೆ ಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ಕೂಡಲೇ ಕ್ರಮ ವಹಿಸಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ,**

1.ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
2.ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು (ಉಪನಿರ್ದೇಶಕರುಗಳ ಮುಖಾಂತರ) ಇವರಿಗೆ ಅಗತ್ಯ ಕ್ರಮಕ್ಕಾಗಿ.
3.ಸಂಬಂಧಿಸಿದ ಶಾಲೆಯ ಮುಖ್ಯ ಶಿಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ).

**ಪ್ರತಿ**

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ,(ಪಾಥಮಿಕ ಮತ್ತು ಪ್ರೌಢ ಶಿಕ್ಷಣ) ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು ಸಾ,ಶಿ,ಇ ಧಾರವಾಡ ಮತ್ತು ಕಲುಬುರಗಿ ಜಿಲ್ಲೆ ಇವರಿಗೆ ಮಾಹಿತಿಗಾಗಿ.
4. ಕಛೇರಿ ಪ್ರತಿ.

# ನಮೂನೆ-1

ಜಿಲ್ಲೆಯ ಹೆಸರು:-

| ಕ್ರ.ಸ | ತಾಲ್ಲೂಕಿನ ಹೆಸರು | ಶಾಲೆಯ ಹೆಸರು ಮತ್ತು ವಿಳಾಸ | ಡೈಸ್ ಕೋಡ್ | ವಿದ್ಯುತ್ ತಂತಿ ಹಾದು ಹೋಗಿರುವ ಸ್ಥಳ: ಶಾಲಾ ಕಟ್ಟಡ/ ಆವರಣ/ಜಮೀನು | ವಿದ್ಯುತ್ ತಂತಿ/ಮೊಬೈಲ್ ಟವರ್/ಇತರೆ (ಅಳವಡಿಸಿದ್ದಲ್ಲಿ) | ಷರಾ |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |
| | | | | | | |

**ಸೂಚನೆ:-**ಮೇಲ್ಕಂಡ ನಮೂನೆಯಲ್ಲಿ ಶಾಲೆಗಳಲ್ಲಿ ವಿದ್ಯುತ್ ಮಾರ್ಗ ಹಾದು ಹೋಗಿದ್ದಲ್ಲಿ ಹಾಗೂ ಮೊಬೈಲ್ ಟವರ್ ಇನ್ನಿತರೆ ಟವರ್ ಅಳವಡಿಸಿದ್ದಲ್ಲಿ ಮಾತ್ರ ಮಾಹಿತಿಯನ್ನು ಭರ್ತಿಮಾಡಿವುದು.

ಉಪನಿರ್ದೇಶಕರ ಸಹಿ ಮತ್ತು ಮೊಹರು